ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
भारतीय मानक ब्यूरो IS / ISO 9001:2008
ON HOLD
Bureau of Indian Standards QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ 9-28
Ref. No. KSFC/H.O./

ದಿನಾಂಕ :
Date 09/04/19

**ಸುತ್ತೋಲೆ**

ವಿಷಯ: ವಿಶೇಷ ಚೇತನ (ಅಂಗವಿಕಲ) ಉದ್ಯೋಗಿಗಳಿಗೆ ಮಿದು (ಫ್ಲೆಕ್ಸಿ) ಸಮಯ ಸೌಲಭ್ಯವನ್ನು ಸಂಸ್ಥೆಯಲ್ಲಿಯೂ ವಿಸ್ತರಿಸುವ ಬಗ್ಗೆ.
ಉಲ್ಲೇಖ: ಕರ್ನಾಟಕ ಸರ್ಕಾರದ ನಡವಳಿಗಳು ಸರ್ಕಾರದ ಆದೇಶ ಸಂಖ್ಯೆ.ಸಿಆಸುಇ 04 ಕತವ 2019 ದಿನಾಂಕ 08.02.2019.

-----------------

ಸಂಸ್ಥೆಯಲ್ಲಿ ವಿವಿಧ ವೃಂದ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ) ಉದ್ಯೋಗಿಗಳಿಗೆ ದಿನಾಂಕ 01.02.2019ರಿಂದ ಜಾರಿಗೆ ಬರುವಂತೆ ಅವರುಗಳ ಭೋಜನ ಸಮಯದಲ್ಲಿ ಮತ್ತು ಕಛೇರಿ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗಧಿತ ಕಛೇರಿ ವೇಳೆಗಿಂತ ಒಂದು ಘಂಟೆ ತಡವಾಗಿ ಹಾಜರಾಗಿ ಮಿದು(ಫ್ಲೆಕ್ಸಿ) ಸಮಯವನ್ನು ಜಾರಿಗೆ ತರಲಾಗಿದೆ.

ಸಂಸ್ಥೆಯಲ್ಲಿಯೂ ಸಹ ಕರ್ನಾಟಕ ಸರ್ಕಾರದ ಆದೇಶ ದಿನಾಂಕ 08.02.2019 ರ ಅನ್ವಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ) ಉದ್ಯೋಗಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಅವರುಗಳ ಭೋಜನ ಸಮಯದಲ್ಲಿ ಮತ್ತು ಕಛೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗಧಿತ ಕಛೇರಿ ವೇಳೆಗಿಂತ ಒಂದು ಘಂಟೆ ತಡವಾಗಿ ಕರ್ತವ್ಯಕ್ಕೆ ಹಾಜರಾಗಲು ಮಿದು (ಫ್ಲೆಕ್ಸಿ) ಸಮಯವನ್ನು ಜಾರಿಗೆ ತರಲಾಗಿದೆ. ಈ ಮಾಹಿತಿಯನ್ನು ಸಂಸ್ಥೆಯ ಎಲ್ಲಾ ವಿಶೇಷ ಚೇತನ (ಅಂಗವಿಕಲ) ಉದ್ಯೋಗಿಗಳ ಗಮನಕ್ಕೆ ತರಲು ಸಹ ಈ ಮೂಲಕ ತಿಳಿಸಲಾಗಿದೆ.

ಮೇಲ್ಕಂಡ ಸುತ್ತೋಲೆಯನ್ನು ಸಂಸ್ಥೆಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಹೊರಡಿಸಲಾಗಿದೆ.

**ಕಾರ್ಯನಿರ್ವಾಹಕ ನಿರ್ದೇಶಕರು-2**

ಗೆ:
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು, ಧಾರವಾಡ, ಗುಲ್ಬರ್ಗಾ.
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-I
ವ್ಯ.ನಿ. ರವರ ಕಛೇರಿಗೆ } ಮಾಹಿತಿಗಾಗಿ.
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ